




ವಿಕಿರಣವನ್ನು ಕಂಡುಹಿಡಿದು ವಾತಾವರಣದಲ್ಲಿ ವಿದ್ಯುತ್‌ಕಾಂತೀಯ ಕ್ಷೇತ್ರವಿರುವುದನ್ನು ನಿರೂಪಿಸಿದ. ವಿಜ್ಞಾನ–ತಂತ್ರಜ್ಞಾನದ ಫಲವಾಗಿ ಹಲವಾರು ಎಲೆಕ್ಟ್ರಾನಿಕ್ ಉಪಕರಣಗಳನ್ನು ತಯಾರಿಸಿರುವ ನಾವು ಅವುಗಳನ್ನು ಬಳಸುವಾಗಲೆಲ್ಲ ಕೃತಕ ವಿದ್ಯುತ್‌ಕಾಂತೀಯ ಅಲೆಗಳಿಗೆ ನಮ್ಮನ್ನು ನಾವು ಒಡ್ಡಿಕೊಳ್ಳುತ್ತೇವೆ. ವಿದ್ಯುತ್‌ಕಾಂತೀಯ ಅಲೆಗಳು ಜೀವಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ ಎಂಬ ವಿವಾದ ಬಹಳ ದಿನಗಳಿಂದ ಇದೆ.

ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕ್ಯಾನ್ಸರ್ ಸಂಶೋಧನಾ ಏಜೆನ್ಸಿಯು 2011ರಲ್ಲಿ ಮೊಬೈಲ್ ಫೋನ್‌ಗಳು ಹೊಮ್ಮಿಸುವ **RF–EMF**ನ್ನು **2B** ಗುಂಪಿಗೆ ಸೇರಿಸಿ, ಅದು ಹೊಮ್ಮಿಸುವ ವಿಕಿರಣ ಹಾನಿಕಾರಕ ಎಂದು ಹೇಳಿತ್ತು. ಜೀವಶಾಸ್ತ್ರಜ್ಞರು ಮತ್ತು ಸಮಾಜ ವಿಜ್ಞಾನಿಗಳು, ಬರಲಿರುವ **5G** ಅಂತರ್ಜಾಲದಿಂದ ಹೊಮ್ಮುವ ಎಲೆಕ್ಟ್ರೋಮ್ಯಾಗ್ನೆಟಿಕ್ ವಿಕಿರಣಗಳು ಮನುಷ್ಯನಿಗೆ ಮಾರಣಾಂತಿಕ ಕಾಯಿಲೆಗಳನ್ನು ತರುತ್ತದೆ ಎಂದು ಕಾರಣ ನೀಡಿ, **5G** ಬರಮಾಡಿಕೊಳ್ಳಲು 'ಅವಸರ ಸಲ್ಲದು', ಅದರ ಅನುಕೂಲಗಳು ಹೊಟ್ಟೆಯಲ್ಲಿ ಅಪಾಯದ ಬೆಟ್ಟವನ್ನೇ ಹೊತ್ತು ತರುತ್ತವೆ ಎಂದು ಎಚ್ಚರಿಸಿದ್ದಾರೆ.

**RF–EMF** ವಿಕಿರಣತರಂಗಾಂತರ 100 ಕಿಲೋ ಹರ್ಟ್ಜ್‌ನಿಂದ 300 ಗಿಗಾ ಹರ್ಟ್ಜ್‌ವರೆಗಿದ್ದು ಅದರ ಕುರಿತು ಹಲವು ವಿವಾದಗಳಿವೆ. ಅದರಿಂದ ಕ್ಯಾನ್ಸರ್, ಜೀನ್ ಹಾನಿ, ನರವ್ಯೂಹದ ಕಾಯಿಲೆ, ಸಂತಾನೋತ್ಪತ್ತಿ ಸಮಸ್ಯೆ, ರೋಗನಿರೋಧಕ ವ್ಯವಸ್ಥೆಯ ಸಮಸ್ಯೆ, ಕಿಡ್ನಿ ಸಮಸ್ಯೆ ಮತ್ತು ಶ್ರವಣ ಸಮಸ್ಯೆಗಳು ಉಂಟಾಗುತ್ತವೆ ಎಂದೂ ಹೇಳಿದೆ. ಮೊಬೈಲ್ ಫೋನ್ ಹೊಮ್ಮಿಸುವ ವಿಕಿರಣಗಳು ಮೆದುಳನ್ನು ಹೊಕ್ಕು ನರವ್ಯೂಹದ ಚಟುವಟಿಕೆಯನ್ನು ಏರುಪೇರಾಗಿಸುತ್ತದೆ ಎಂದೂ ಹೇಳಲಾಗಿದೆ. ಅಲ್ಲದೆ ಮೊಬೈಲ್ ಹೊಮ್ಮಿಸುವ ಬಿಸಿಯೂ ಅಪಾಯಕಾರಿ ಎನ್ನಲಾಗಿದೆ. ಮೊಬೈಲ್ ಹೊಮ್ಮಿಸುವ ವಿದ್ಯುತ್‌ಕಾಂತೀಯ ಅಲೆಗಳು ಹೆಚ್ಚು ಆವರ್ತನ ಹೊಂದಿದ್ದು ಮನುಷ್ಯನ ದೇಹವನ್ನು ಸುಲಭವಾಗಿ ಪ್ರವೇಶಿಸುತ್ತವೆ. ಅದು ಹಳೆಯ ಮಾತು. ಈಗ ತಂತ್ರಜ್ಞಾನ ಇನ್ನೂ ಮುಂದುವರೆದಿದೆ, ಹಾಗೇನೂ ಆಗುವುದಿಲ್ಲ ಎಂದು ಕೆಲವು ದೇಶಗಳು ವಾದಿಸಿದ್ದರಿಂದ 2018ರಲ್ಲಿ ಅಮೆರಿಕದ 'ನ್ಯಾಷನಲ್ ಟಾಕ್ಸಿಕಾಲಜಿ ಪ್ರೋಗ್ರಾಂ'ನ ತಜ್ಞರು ವಿಶ್ವಸಂಸ್ಥೆ ನೀಡಿದ ವರದಿಯ ಅಂಶಗಳನ್ನು ಪರಾಮರ್ಶಿಸಿ, **3G** ಮತ್ತು **4G** ನೆಟ್‌ವರ್ಕ್‌ಗಳಲ್ಲಿ ಬಳಕೆಯಾಗುವ ರೇಡಿಯೋ ವಿದ್ಯುನ್ಮಾನ ತರಂಗಗಳು 900 ಮೆಗಾ ಹರ್ಟ್ಜ್‌ನಷ್ಟಿದ್ದು ಗಂಡು ಮತ್ತು ಹೆಣ್ಣು ಇಲಿಗಳ ಮೇಲೆ ಪ್ರಯೋಗಿಸಿದಾಗ ನರಕೋಶಗಳಿಗೆ ಕ್ಯಾನ್ಸರ್ ತಗುಲಿದ್ದನ್ನು ಮತ್ತು ಮೆದುಳಿನಲ್ಲಿ ಗ್ಲಿಯೋಮಾ ಆದದ್ದನ್ನು ಖಚಿತಪಡಿಸಿತು. ಅದೇ ವರ್ಷ ಇಟಲಿಯ 'ಸೆಸಾರೆ ಮೂಲ್ಟೋನಿ ಕ್ಯಾನ್ಸರ್ ರಿಸರ್ಚ್ ಕೇಂದ್ರ'ದ ವಿಜ್ಞಾನಿಗಳು ಸುಮಾರು 3000 ಇಲಿಗಳ ಮೇಲೆ ಸತತ ಹನ್ನೊಂದು ವರ್ಷಗಳ ಕಾಲ 1.8 ಗಿಗಾ ಹರ್ಟ್ಜ್ ತರಂಗಗಳನ್ನು ಬಳಸಿ ಇಲಿಗಳು ಕಾಯಿಲೆಗೆ ತುತ್ತಾದದ್ದನ್ನು ಸಾಕ್ಷಿ ಸಮೇತ ನಿರೂಪಿಸಿದರು.

**5G** ತಂತ್ರಜ್ಞಾನ ಕೆಲಸ ಮಾಡಲು ಬೇಕಾಗುವ **RFEMF** ರೇಡಿಯೇಶನ್ 600 **MHZ**ನಿಂದ 86 **GHZ**ನೊಳಗಿರುವುದರಿಂದ ಮೇಲೆ ತಿಳಿಸಿದ ಅಡ್ಡ ಪರಿಣಾಮಗಳು ಮನುಷ್ಯನಿಗೂ ಖಂಡಿತಾ ಉಂಟಾಗುತ್ತವೆ ಎಂದು ನಂಬಲಾಗಿದೆ. ಕ್ಯಾನ್ಸರ್ ಮಾತ್ರವಲ್ಲ, **5G**ಯಿಂದ ಹೃದಯದ ಕಾಯಿಲೆ, ಟೈಪ್–2 ಡಯಾಬಿಟೀಸ್, ಮಾನಸಿಕ ಪ್ರಕ್ಷುಬ್ಧತೆ, ಖಿನ್ನತೆ, ಆತುರತೆಗಳು ಹೆಚ್ಚುತ್ತದೆ ಎಂದಿರುವ